

ವಿಮರ್ಶಕ ಕೆ.ಜಿ.ನಾಗರಾಜಪ್ಪ ಅವರ ಸಂದರ್ಶನ ಮಾಡುತ್ತಿರುವ ಲೇಖಕಿ ಎಂ.ಎಸ್.ಆಶಾದೇವಿ

ಅನ್ನುವ ತಹತಹ ಅದು ಅನ್ನಿಸುತ್ತೆ. ದೇವರು ಮತ್ತು ದೆವ್ವಗಳಿಗಿಂತ ಅವುಗಳನ್ನ ಸೃಷ್ಟಿಸಿದ ಮನುಷ್ಯನ ಸ್ವಭಾವ ನನ್ನನ್ನ ಬಹಳವಾಗಿ ಕಾಡಿತು.

◆ **ನೀವು ಎಂ.ಎ. ಮುಗಿಸಿದ ಮೇಲೆ ಮತ್ತೆ ತುಮಕೂರಿಗೆ ಬಂದು ಅಲ್ಲಿ ಅಧ್ಯಾಪನ ಶುರು ಮಾಡಿದ್ರಿ...**

ಹೌದು, ಮೊದಲು ಅಲ್ಲಿ ಹೈಸ್ಕೂಲಿನಲ್ಲಿ ಕೆಲಸ ಮಾಡಿದೆ. ಅಲ್ಲೂ ನನಗೆ ಏನೇನೆಲ್ಲಾ ಅನುಭವಗಳಾದ್ವು. ಅಲ್ಲಿ ಕೆಲವರು ಹೆಣ್ಣುಮಕ್ಕಳಿಗೆ ಬಹಳ ತೊಂದ್ರೆ ಕೊಡ್ತಾ ಇದ್ರು. ನಾವೆಲ್ಲಾ ಗಸ್ತು ತಿರುಗ್ತಾ ಇದ್ವಿ. ಒಬ್ರು ಪಿ.ಟಿ. ಮೇಷ್ಟ್ರು ಒಂದ್ಸಲ ಸಿಕ್ಕಾಕಿಕೊಂಡವರ ಕೈಕಾಲೇ ಮುರಿದುಬಿಟ್ಟಿದ್ರು. ನನಗೆ ಒಂದು ಕಾಗದ ಬಂದಿತ್ತು, 'ನಿನ್ನ ಗತಿ ಏನಾಗುತ್ತೆ ನೋಡ್ಕೋ... ನಿನ್ನ ತಿಥಿಗೆ ಅಕ್ಕಿ ಕೂಳು ಹೊಂಚಿಕೋ' ಅಂತ. ಸ್ವಾಮಿಗಳಿದ್ದೋರು, 'ಇದೇನಪ್ಪಾ ಕತೆ, ಇರು, ಯಾರಿಗಾದರೂ ಪೊಲೀಸ್ನೋರಿಗೆ ಹೇಳ್ತೀನಿ' ಅಂದ್ರು. ನಾನು, 'ಸ್ವಾಮೀಜಿ, ನನಗೇನೂ ಆಗಲ್ಲ ನೀವು ಸುಮ್ನಿರಿ' ಅಂತಿದ್ದೆ. ಸ್ಕೂಲಿನಲ್ಲಿ ಏನೇ ತೊಂದರೆ ಆದರೂ ಸ್ವಾಮಿಗಳು 'ಹೋಗು, ನಾಗರಜಪ್ಪನ್ನ ನೋಡು' ಅಂತ ಹೇಳ್ತಿದ್ರು.

ಆಗೆಲ್ಲಾ ನಾನು ಯೋಗಾಭ್ಯಾಸ ಮಾಡ್ತಾ ಇದ್ದೆ. ದಿನಕ್ಕೆ ಒಂದು ಹೊತ್ತು, ಮಧ್ಯಾಹ್ನ ಮಾತ್ರ ಊಟ ಮಾಡ್ತಾ ಇದ್ದೆ. ಯಾರೋ ಸ್ವಾಮಿಗಳಿಗೆ ಇದನ್ನ ಹೇಳಿ, ಅವರು ನನ್ನನ್ನ ಕರೆಸಿದ್ದೇ, 'ನಾಳೆಯಿಂದ ನೀನು ನನ್ನ ಜೊತೇಲೇ ಪ್ರಸಾದ ತೊಗೋಬೇಕು' ಅಂದ್ರು. ಬೆಳಿಗ್ಗೆ ಹೊತ್ತು ಅವರು ಏನು ತೊಗೊಳ್ತಾ ಇದ್ರೋ ಅದನ್ನೇ ನನಗೂ ಬಡಿಸ್ತಾ ಇದ್ರು. ಬಹಳ ಪ್ರೀತಿ ಅವರಿಗೆ ನನ್ನ ಮೇಲೆ. ಇದನ್ನ ಗಮನಿಸಿದೋರು, ಇವನನ್ನೇ 'ಮರಿ' ಮಾಡ್ಕೋತಾರೆ ಅಂತಾನೂ ಮಾತಾಡ್ಕೋತಾ ಇದ್ರು. ಆಮೇಲೆ ನಾನು ಅಲ್ಲಿನ ಕಾಲೇಜಿನಲ್ಲಿ ಅಧ್ಯಾಪಕನಾಗಿ ಸೇರಿದೆ.

◆ **ಈಗ ಸ್ವಲ್ಪ ನಿಮ್ಮ ಬರವಣಿಗೆ, ಆಲೋಚನೆಗಳ ಬಗ್ಗೆ ಸ್ವಲ್ಪ ಮಾತನಾಡೋಣ. ಶುರುವಿನಿಂದ ಇಲ್ಲಿಯತನಕ ನಿಮ್ಮದು 'ಅವೈದಿಕ'ಲೋಕದ ಪ್ರತಿಪಾದನೆ. ಅಲ್ಪಸಂಖ್ಯಾತ ವೈದಿಕತೆಯು ಬಹುಸಂಖ್ಯಾತ ಅವೈದಿಕರನ್ನು ದಮನಿಸುತ್ತಾ ಬಂದಿರುವುದನ್ನು ಮಂಡಿಸುವುದು ಒಂದಾದರೆ, ಮತ್ತೊಂದು ಅವೈದಿಕ ಲೋಕದ ಸ್ಥಾಪನೆ. ಇದನ್ನ ನಿಮ್ಮ ಮೂಲ ಚಿಂತನೆ ಅಂತ ಕರೆಯಬಹುದು.**